O.S. NO. 16/2018
PW -2 .
Dated 09-07-2026.

ಸಾಕ್ಷಿಯನ್ನು ಈ ದಿನ ದಿನಾಂಕ 09-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 2 ನೇ ಪ್ರತಿವಾದಿ ಪರವಾಗಿ ಶ್ರೀ ವಿ ಜಿ ಕೆ ವಕೀಲರಿಂದಃ

ನನ್ನ ಶಿಕ್ಷಣ ಪಿಯುಸಿ ಮುಗಿಸಿದಿರುತ್ತದೆ. ವಾದ ಪತ್ರ ಬರೆಯಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ಪ್ರಸ್ತುತ ದಾವೆಯನ್ನು ನನ್ನ ತಂದೆಯವರು ದಾಖಲ ಮಾಡಿರುತ್ತಾರೆ. ಪ್ರಸ್ತುತ ದಾವೆಯನ್ನು ವಾಟ್ನಿ ಮತ್ತು ಪ್ರತ್ಯೇಕ ಕಬ್ಜಾ ಕೊರಿ ಮಾಡಿರುತ್ತೇವೆ. ದಾವಾ ಅನುಸೂಚಿ ಅ ಆಸ್ತಿ ಅನುಕ್ರಮ ನಂ. 1 ಮತ್ತು 3 ವಾದಿ ಮತ್ತು 1 ರಿಂದ 10 ನೇ ಪ್ರತಿವಾದಿಗಳ ಹಿರಿಯರಿಂದ ಬಂದಿರುವ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿ ವಾದಿ ಮತ್ತು 1 ರಿಂದ 9 ನೇ ಪ್ರತಿವಾದಿಗಳ ಹಿರಿಯರಿಂದ ಬಂದಿರುವ ಆಸ್ತಿಗಳು ಇರುತ್ತವೆ ಎಂದು ನುಡಿದಿರುತ್ತಾರೆ. ದಾವಾ ಅನುಸೂಚಿ ಅ ಆಸ್ತಿ ಅನುಕ್ರಮ ನಂ. 2 ನೇ ಆಸ್ತಿ 3 ನೇ ಪ್ರತಿವಾದಿಗೆ ಸಂಬಂದಿಸಿದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ಅದು 3 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಅ ಆಸ್ತಿ ಅನುಕ್ರಮ ನಂ. 3 ರಿಂದ 6 ನೇ ಆಸ್ತಿಗಳ ಪೈಕಿ 9 ಎಕರೆ ಆಸ್ತಿಯನ್ನು ವಾದಿ ಮತ್ತು ಪ್ರತಿವಾದಿಗಳ ತಂದೆ ಬಸವಂತಪ್ಪ ಇವರು 6 ನೇ ಪ್ರತಿವಾದಿ ಶಾಂತವ್ವರವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ 9 ಎಕರೆ ಆಸ್ತಿಯನ್ನು ವಾದಿ ತಂದೆ ಬಸವಂತಪ್ಪ ರವರು 6 ನೇ ಪ್ರತಿವಾದಿಗೆ

ಬಿಟ್ಟು ಕೊಟ್ಟಿದ್ದರಿಂದ 6 ನೇ ಪ್ರತಿವಾದಿ ತನ್ನ ಗಂಡನ ಮನೆಯ 4 ಎಕರೆ 14 ಗುಂಟೆ ಆಸ್ತಿ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ವಾದಿಯ ತಂದೆ ಬಸವಂತಪ್ಪ ರವರಿಗೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು. 6 ನೇ ಪ್ರತಿವಾದಿಗೆ ವಾದಿಯ ತಂದೆ ಬಸವಂತಪ್ಪ ರವರು 9 ಎಕರೆ ಆಸ್ತಿ ಬಿಟ್ಟು ಕೊಡುವಾಗ 1 ರಿಂದ 8 ನೇ ಪ್ರತಿವಾದಿಗಳು ಕಬೂಲಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ದಾವಾ ಅನುಸೂಚಿ ಅ ಆಸ್ತಿ ಅನುಕ್ರಮ ನಂ. 7 ಆಸ್ತಿಯನ್ನು 1, 3 ಮತ್ತು 4 ನೇ ಪ್ರತಿವಾದಿಯರು ತಮ್ಮ ಸ್ವಂತ ಮಾಲ್ಕಿ ಕಬ್ಜಾ ವಹಿವಾಟನಲ್ಲಿ ಇಟ್ಟು ಕೊಂಡು ಸಾಗವಳಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸುಳ್ಳು. ಸದರಿಯವರೇ ಸದರಿ ಜಮಿನನ್ನು ಮೊದಲು ಪಡ ಇದ್ದುದ್ದನ್ನು ಸಾಗುವಳಿ ಜಮಿನನ್ನಾಗಿ ಮಾಡಿ ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಅಣ್ಣಾಸಾಬ ಇನಾಮದಾರರವರು ಹೆಸರು ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿಯವರು ಹೆಸರು ದಾಖಲಿರುವುದನ್ನು ಪ್ರಶ್ನಿಸಿ 1, 3 ಮತ್ತು 4 ನೇ ಪ್ರತಿವಾದಿಯರು ಅಸಲು ದಾವಾ ನಂ. 30/2009 ರಿತ್ಯ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ 1, 3 ಮತ್ತು 4 ನೇ ಪ್ರತಿವಾದಿಯರು ಹಾಗೂ ಸದರಿ ಅಣ್ಣಾಸಾಬ ಇನಾಮದಾರವರು ರಾಜಿ ಮಾಡಿಕೊಂಡು ಎಂದರೆ ಸಾಕ್ಷಿ ನಮ್ಮ ಕುಟುಂಬದ ಎಲ್ಲ ಸದಸ್ಯರ ಒಪ್ಪಿಗೆ ಮೆರೆಗೆ ರಾಜಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ದಾವೆ ರಾಜಿಯಲ್ಲಿ ಇತ್ಯರ್ಥ ಆದ ನಂತರ 1, 3 ಮತ್ತು 4 ನೇ ಪ್ರತಿವಾದಿಯವರು ದಾವಾ ಅನುಸೂಚಿ ಆಸ್ತಿ 7 ನೇ ಆಸ್ತಿಯನ್ನು ಕಬ್ಜಾ ವಹಿವಾಟ ಮಾಡುತ್ತಾ ಬರುತ್ತಿದ್ದಾರೆ ಎಂದರೆ

ಸರಿಯಲ್ಲ. ದಾವಾ ಅನುಸೂಚಿ ಅ ಆಸ್ತಿ ಅನುಕ್ರಮ ನಂ. 8 ಮತ್ತು 9 ಆಸ್ತಿಗಳನ್ನು 1 ರಿಂದ 4 ನೇ ಪ್ರತಿವಾದಿಗಳು ಸುಮಿತ್ರಾಬಾಯಿ ಕೊಂ ತೆರ್ಕಪ್ಪ ಜಕಾತಿರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಉಪನೊಂದಣಾದಿಕಾರಿ ಕಚೇರಿ ಬೈಲಹೊಂಗಲದಲ್ಲಿ ದಿನಾಂಕ 28-12-1983 ರಲ್ಲಿ ಖರೀದಿ ಪತ್ರ ನೊಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಖರೀದಿ ವಿಷಯ ನನಗೆ ಸಂಪೂರ್ಣ ಮಾಹಿತಿ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಮನೆ ಆಸ್ತಿಗಳ ಪೈಕಿ 77 ಮತ್ತು 88 ಆಸ್ತಿಗಳು ವಾದಿ ಮತ್ತು 1 ರಿಂದ 8 ನೇ ಪ್ರತಿವಾದಿಗಳ ಸಾಮೂಹಿಕ ಕಬ್ಜಾ ವಹಿವಾಟನಲ್ಲಿ ಇರುತ್ತವೆ ಎಂದರೆ ನಿಜ.

2 ನೇ ಪ್ರತಿವಾದಿ ನನ್ನ ಕಾಕಾ. ಅವರು ಬ್ಯಾಂಕ ನಲ್ಲಿ ನೌಕರಿ ಮಾಡುತ್ತಿದ್ದರು, ಈಗ ನಿವೃತ್ತಿ ಹೊಂದಿರುತ್ತಾರೆ. 2 ನೇ ಪ್ರತಿವಾದಿ ಬೆಳಗಾವಿಯ ಡಿಸಿಸಿ ಬ್ಯಾಂಕನಲ್ಲಿ ನೌಕರಿ ಮಾಡಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ನಿಜ. ಅವರು 1996 ರ ಪೂರ್ವದಲ್ಲಿ ನೌಕರಿಗೆ ಸೇರಿದ್ದರು ಎಂದರೆ ಸರಿ. 2 ನೇ ಪ್ರತಿವಾದಿ ತಾನು ನೌಕರಿ ಮಾಡುವ ಸಮಯದಲ್ಲಿ ದಾವಾ ಮನೆಗಳ ಪೈಕಿ ಆಸ್ತಿ ಅನುಕ್ರಮ ನಂ. 5 ಆಸ್ತಿಯನ್ನು ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಮನೆಗಳ ಪೈಕಿ ಆಸ್ತಿ ಅನುಕ್ರಮ ನಂ. 3 ನೇ ಆಸ್ತಿಯನ್ನು 2 ನೇ ಪ್ರತಿವಾದಿ ತನ್ನ ಸಂಬಳದಿಂದ ಬಂದ ಹಣದಿಂದ ಮತ್ತು ಅವರ ನೌಕರಿ ಮೇಲೆ ಸಾಲ ರೂ. 75 ಸಾವಿರ ಗಳನ್ನು ತೆಗೆದು ಹೀಗೆ ಒಟ್ಟು 80 ಸಾವಿರಕ್ಕೆ ಸ್ವಂತ ಖರೀದಿ ಮಾಡಿರುತ್ತಾರೆ

ಎಂದರೆ ಸುಳ್ಳು. ಸದರಿ ಖರೀದಿ ಪ್ರಕಾರ 2 ನೇ ಪ್ರತಿವಾದಿ ಹೆಸರಿನಲ್ಲಿ ಸದರಿ ಆಸ್ತಿ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವಾ ಮನೆಗಳ ಪೈಕಿ ಆಸ್ತಿ ಅನುಕ್ರಮ ನಂ. 3 ಆಸ್ತಿ ಖರೀದಿ ಮಾಡುವ ಕಾಲಕ್ಕೆ ಖುಲ್ಲಾ ಜಾಗಾ ಇತ್ತು, ಬಿಡಿಸಿಸಿ ಬ್ಯಾಂಕನಲ್ಲಿ ರೂ. 2 ಲಕ್ಷ ಸಾಲ ಪಡೆದು 2 ನೇ ಪ್ರತಿವಾದಿ ಮನೆ ಕಟ್ಟಿಸಿರುತ್ತಾನೆ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿ ಉತ್ಪನದಿಂದ ಕಟ್ಟಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಹೀಗೆ ಮನೆ ಕಟ್ಟಿಸಿದ ನಂತರ ಸದರಿ ಆಸ್ತಿಗೆ ಈಗ ಪುರಸಭೆ ಆಸ್ತಿ ನಂ. 725ಎಫ /2ಎ/3 ಮತ್ತು 725ಎಫ /2ಎ/3/1 ಅಂತಾ ಎರಡು ನಂಬರಗಳು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯವರು 2 ನೇ ಪ್ರತಿವಾದಿಯ ಹೆಸರಿಗೆ ಸದರಿ ಆಸ್ತಿ ದಾಖಲಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ಮೇಲೆ ಬ್ಯಾಂಕನವರು ಸಾಲ ಕೊಡವಾಗ ನನ್ನ ತಂದೆ 1 ನೇ ಪ್ರತಿವಾದಿ, 3 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಗಳು 2 ನೇ ಪ್ರತಿವಾದಿ ಹೆಸರಿಗೆ ಆಸ್ತಿ ದಾಖಲಿಸಲು ಒಪ್ಪಿಗೆ ನೀಡಿರುತ್ತಾರೆ ಎಂದರೆ ಸುಳ್ಳು. ಸದರಿ ಮನೆಯಲ್ಲಿ 2 ನೇ ಪ್ರತಿವಾದಿ ಒಂದು ಕೋಣೆಯಲ್ಲಿ ವಾಸವಿದ್ದು ಇನ್ನೊಂದು ಕೋಣೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ನಾವೆಲ್ಲರು ಸೇರಿ ಬಾಡಿಗೆಗೆ ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮನೆ ನಮಗೆ ಯಾವುದೇ ರೀತಿ ಸಂಬಂದ ಇಲ್ಲದೇ ಇದ್ದರು ಸಹ ಎಲ್ಲರೂ ಸೇರಿ ಬಾಡಿಗೆ ಕೊಟ್ಟಿದ್ದೆವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯ ಆಸ್ತಿಯ 2 ಮೀಟರ ಕೂಡಿಸಿದ್ದು ಸದರಿ 2 ಮೀಟರಗಳ ವಿದ್ಯುತ ಬಿಲ್ಲನ್ನು 2 ನೇ ಪ್ರತಿವಾದಿ ಪಾವತಿಸುತ್ತಾನೆ ಎಂದರೆ ಸರಿಯಲ್ಲ. ಸದರಿ 2 ಮನೆ ಆಸ್ತಿಗಳಿಗೆ ನಾವು ಯಾವುದೇ ರೀತಿ ಸಂಬಂದ ಇಲ್ಲದೇ

ಇದ್ದರು ಸಹ 2 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ದಾವಾ ಆಸ್ತಿಗಳೆಲ್ಲವು ನಮ್ಮ ಹಿರಿಯರಿಂದ ಬಂದ ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 5 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.